ಉ) ಜಿಲ್ಲೆಯಲ್ಲಿ ಹಾಲಿ 679 ಹುದ್ದೆಗಳು ಖಾಲಿ ಇದ್ದು 1995-96ನೇ ಸಾಲಿನಲ್ಲಿ 370 ಹೆಚ್ಚುವರಿ ಹೊಸ ಹುದ್ದೆಗಳು ಮಂಜೂರಾಗಿದ್ದು, ಒಟ್ಟು 1,049 ಹುದ್ದೆಗಳ ಅಗತ್ಯವಿದೆ. ಇದನ್ನು 1995-96ನೇ ಸಾಲಿನ ಪ್ರಾಥಮಿಕ ಶಿಕ್ಷಕರ ನೇಮಕಾತಿಯಲ್ಲಿ ಭರ್ತಿ ಮಾಡಲು ಉದ್ದೇಶಿಸಲಾಗಿದೆ.

ಅಧ್ಯಕ್ಷರು : ಉತ್ತರಗಳನ್ನು ಮಂಡಿಸಲಾಯಿತು. ಮಾನ್ಯ ಖರ್ಗೆಯವರೆ, ತಮ್ಮ ಕೆಲವು ಸ್ನೇಹಿತರು ನಿಯಮ 69ರ ಅಡಿಯಲ್ಲಿ ನನಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದಾರೆ. ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ನಾವು ಹೇಗಿದ್ದರೂ ಅಜೆಂಡಾದಲ್ಲಿ ಈ ವಿಚಾರವನ್ನು ಸೇರಿಸಿದ್ದೇವೆ. ನಿಯಮ 60ರ ಕೆಳಗೆ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ. ದಯವಿಟ್ಟು ಮಾನ್ಯ ಸದಸ್ಯರು ಸಹಕರಿಸಬೇಕು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಕೃಷ್ಣಾ ಬೇಸಿನ್‌ನಲ್ಲಿರತಕ್ಕ ಎಲ್ಲಾ ಪ್ರಾಜೆಕ್ಟ್‌ಗಳೂ ಸ್ಥಗಿತಗೊಂಡಿರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಅಭಿಪ್ರಾಯ ಎಂದರೆ ಕೃಷ್ಣಾ ಬೇಸಿನ್‌ನಲ್ಲಿರುವ ಎಲ್ಲ ಪ್ರಾಜೆಕ್ಟ್‌ಗಳೂ ಏನು ಸ್ಥಗಿತಗೊಂಡಿವೆ, ಮತ್ತು ನಮ್ಮ ಪಾಲಿಗೆ ಬರತಕ್ಕ ನೀರನ್ನು 2000 ಇಸವಿಯೊಳಗೆ ಉಪಯೋಗ ಮಾಡಿಕೊಳ್ಳತಕ್ಕ ವಿಷಯದ ಬಗ್ಗೆ ಚರ್ಚೆ ಮಾಡಲು ತಾವು ಅನುಮತಿ ಕೊಟ್ಟಿದ್ದಿರಿ. ನಿರ್ದಿಷ್ಟ ವಿಷಯಕ್ಕೆ ಸಂಬಂಧಪಟ್ಟಂತೆ ನನ್ನ ವಾದ ಇಷ್ಟೆ. ಮಾನ್ಯ ಮುಖ್ಯ ಮಂತ್ರಿಗಳು ಕಳೆದ ಅಧಿವೇಶನದಲ್ಲಿ ಮತ್ತು ಮೊನ್ನೆ ಕೂಡ ಇಲ್ಲಿ ಮಾತನಾಡುವಾಗ ನಾವು ಆಗಸ್ಟ್ ತಿಂಗಳಲ್ಲಿ ಕೃಷ್ಣ ಭಾಗ್ಯ ಜಲ ನಿಗಮದಿಂದ ಸುಮಾರು 400 ಕೋಟಿ ರೂಪಾಯಿಗಳನ್ನು ಸಂಗ್ರಹಿಸುತ್ತೇವೆಂದು ಹೇಳಿದರು. ಮೊನ್ನೆ ಮಾತನಾಡುತ್ತಾ ನಾವು ಸೆಪ್ಟಂಬರ್ ತಿಂಗಳಲ್ಲಿ ಲಾಂಚ್ ಮಾಡಿದ್ದೇವೆ ಅದಕ್ಕಾಗಿ 4ನೇ ತಾರೀಖು ನಮಗೆ ನಿಖರವಾಗಿ ಗೊತ್ತಾಗುತ್ತದೆ. ಅದರಿಂದ 400 ಕೋಟಿ ರೂಪಾಯಿ ಬರುತ್ತದೋ ಅಥವಾ ಎಷ್ಟು ಬರುತ್ತದೋ ಎಂಬುದು ಗೊತ್ತಾಗುತ್ತದೆಂದು ಹೇಳಿದರು. ನನಗೆ ಬಂದಿರುವ ಮಾಹಿತಿ ಪ್ರಕಾರ ಇವರು 400ಕೋಟಿ ರೂಪಾಯಿಗಳನ್ನು ಸಂಗ್ರಹಿಸುವುದಕ್ಕೆ ಸಾಧ್ಯವಾಗಿಲ್ಲ. ಅಂದ ಮೇಲೆ ಇವರು 400 ಕೋಟಿ ಸಂಗ್ರಹಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವುದಾದರೆ, ಅವರು ಕೊಟ್ಟಂಥ ಅಪ್ಪರ್‌ಕೃಷ್ಣಾದ ಫಿಸಿಕಲ್ ಟಾರ್ಗೆಟ್ ಏನಿದೆ ಅದನ್ನು ಅಚೀವ್ ಮಾಡುವುದಕ್ಕೆ ಸಾಧ್ಯವಿಲ್ಲ. 2ನೇ ಹಂತವನ್ನು ಡಿಸೆಂಬರ್ ಅಥವಾ ಜನವರಿಯಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ನಿಮಗೆ ಮೊದಲ ಹಂತದ ಸೆಪ್ಟಂಬರ್ ತಿಂಗಳಲ್ಲೇ 400 ಕೋಟಿ ರೂಪಾಯಿಗಳನ್ನೇ ಸಂಗ್ರಹಿಸಲು ಸಾಧ್ಯವಿಲ್ಲದೇ ಹೋಗಿರುವಾಗ ಡಿಸೆಂಬರ್ ಮತ್ತು ಜನವರಿಯಲ್ಲಿ ಇನ್ನೂ 400 ಕೋಟಿ ರೂಪಾಯಿಗಳನ್ನು ಸಂಗ್ರಹಿಸುವುದಕ್ಕೆ ಖಂಡಿತ ಸಾಧ್ಯವಿಲ್ಲ. ಹೀಗಾಗಿ ಒಟ್ಟಾರೆ 800 ಕೋಟಿ ರೂಪಾಯಿಗಳ ಟಾರ್ಗೆಟ್‌ನ್ನು ಏನು ಇಟ್ಟುಕೊಂಡಿದ್ದೀರಿ ಇದಕ್ಕೆ ನಿಮಗೆ ಉಳಿದಿರುವುದು ಕೇವಲ 5 ತಿಂಗಳು ಮಾತ್ರ. ಅಷ್ಟರಲ್ಲಿ ನೀವು 800 ಕೋಟಿ ರೂಪಾಯಿಗಳನ್ನು ಹೇಗೆ ಸಂಗ್ರಹಿಸುತ್ತೀರಿ? ಯಾವ ಯಾವ ಸಂಸ್ಥೆಗಳ ಮುಖಾಂತರ ಸಂಗ್ರಹಿಸುತ್ತೀರೆಂಬುದು ನಮಗೆ ಗೊತ್ತಾಗುತ್ತಿಲ್ಲ. ಅಲ್ಲದೆ ನೀವು ಆಗಸ್ಟ್‌ನಲ್ಲಿ ಮಾಡುತ್ತೇವೆ, ಸೆಪ್ಟಂಬರ್‌ನಲ್ಲಿ ಮಾಡುತ್ತೇವೆಂದು ಒಂದು ಟೈಮನ್ನೂ ಕೂಡ ಕೊಟ್ಟಿದ್ದೀರಿ. ಇವತ್ತು ಸರ್ಕಾರ ತನ್ನ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದರಲ್ಲಿ ಸಂಪೂರ್ಣ ವಿಫಲವಾಗಿದೆ. ಇನ್ನು ಎರಡನೆಯದಾಗಿ ಹೇಳುವುದಾದರೆ,

ಒಬ್ಬ ಮಾನ್ಯ ಸದಸ್ಯರು : ನಿಯಮ 69ರ ಕೆಳಗೆ ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ನಮ್ಮ ವಿರೋಧಪಕ್ಷದ ನಾಯಕರು ಮತ್ತಿತರರು ಸಹಿ ಹಾಕಿ ಕೊಟ್ಟಿದ್ದೇವೆ. ಶೂನ್ಯವೇಳೆಯಲ್ಲಿ.....

ಅಧ್ಯಕ್ಷರು : ಇದು ಶೂನ್ಯ ವೇಳೆ ಅಲ್ಲ. ಶೂನ್ಯವೇಳೆ ಇಲ್ಲ. ನಿಯಮ 60ರ ಕೆಳಗೆ ಅವರು ನಿಲುವಳಿ ಸೂಚನೆಗೆ ನೋಟೀಸ್ ಕೊಟ್ಟಿದ್ದಾರೆ. ಹೇಗಿದ್ದರೂ ನಾವು ಈ ವಿಚಾರವನ್ನು ಅಜೆಂಡಾದಲ್ಲಿ ಸೇರಿಸಿದ್ದೇವೆ, 69ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುತ್ತೇವೆ, ದಯವಿಟ್ಟು ಇದನ್ನು ಒತ್ತಾಯ ಮಾಡಬೇಡಿ ಎಂದು ಅವರಿಗೆ ಹೇಳಿದೆ. ಅದಕ್ಕೆ ಅವರು ಏನೋ ಹೇಳುವುದಕ್ಕೆ ಹೊರಟಿದ್ದರಿಂದ ನಾನು ಒಂದೆರಡು ನಿಮಿಷ ಅವಕಾಶ ಕೊಟ್ಟಿದ್ದೇನೆ. ಆಮೇಲೆ ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಯಮ 60ರ ಅಡಿಯಲ್ಲಿ ಅಡಜರ್ನ್‌ಮೆಂಟ್ ಮೋಷನ್‌ನ್ನು ಕಳುಹಿಸಿಕೊಟ್ಟಿದ್ದೇವೆ. ನಾವು ಆ ಚರ್ಚೆಯಲ್ಲಿ ಭಾಗವಹಿಸಬಾರದೆಂದು ಇಲ್ಲ. ಆದರೆ ನಾವು ತಂದಿದ್ದು ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳಲ್ಲಿ 400 ಕೋಟಿ ಸಂಪನ್ಮೂಲಗಳನ್ನು ಸಂಗ್ರಹಿಸುತ್ತೇವೆ ಮತ್ತು ಅದೇರೀತಿಯಲ್ಲಿ ಆ ಹಣವನ್ನು ಖರ್ಚು ಮಾಡುತ್ತೇನೆಂದೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು, ಪ್ರತಿ ತಿಂಗಳ ಕೆಲಸದ ಗುರಿಯನ್ನೂ ಕೂಡ ಹೇಳಿದ್ದರು. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಅವರು ಹಣವನ್ನು ಸಂಗ್ರಹಿಸುವುದಕ್ಕೆ ಆಗಲಿಲ್ಲ. ಇಡೀ ಕೃಷ್ಣಾ ಬೇಸಿನ್‌ನಲ್ಲಿರುವ ಪ್ರಾಜೆಕ್ಟ್‌ಗಳ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳುವಂಥಾದ್ದು ನಿಯಮ 69ರ ಅಡಿಯಲ್ಲಿದೆ. ಆದರೆ ನನ್ನ ಖಚಿತ ವಾದ ಎಂದರೆ, ಇವರು ಆಗಸ್ಟ್‌ಮತ್ತು ಸೆಪ್ಟಂಬರ್ ತಿಂಗಳಲ್ಲಿ 400 ಕೋಟಿ ಮತ್ತು ಜನವರಿ ತಿಂಗಳಲ್ಲಿ ಇನ್ನೂ 400 ಕೋಟಿ ಸಂಗ್ರಹಿಸಿ ಈ ಪ್ರಾಜೆಕ್ಟ್‌ಗೆ 1 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೇವೆಂಬ ವಾದವನ್ನು ಇಲ್ಲಿ ಮಂಡಿಸಿ ನಮಗೆ ಸಮಾಧಾನ ಮಾಡತಕ್ಕದ್ದು ಮತ್ತು ಈ ಕರ್ನಾಟಕ ರಾಜ್ಯದ ಜನತೆಗೆ ಆಶ್ವಾಸನೆ ಕೊಡುವ ಪ್ರಯತ್ನವನ್ನು ಏನು ಮಡಿದ್ದರು ಅದರ ಬಗ್ಗೆ ನಾವು ವಾಸ್ತವ ವಿಚಾರವನ್ನು ತಿಳಿದುಕೊಂಡಾಗ ಇವರು ವಿಫಲರಾಗಿದ್ದಾರೆ, ಆ ಹಣದ ಸಂಪನ್ಮೂಲವನ್ನು ಸಂಗ್ರಹಿಸುವುದಕ್ಕೆ ಇವರಿಗೆ ಆಗಿಲ್ಲ. ಇವರಿಗೆ ಆ ಹಣ ಬಂದಿಲ್ಲ.

11.00 ಎ.ಎಂ.

ಅಧ್ಯಕ್ಷರು : ನಾನು ತಮಗೆ ಏನು ಅಪೀಲ್ ಮಾಡುತ್ತೇನೆಂದರೆ, ತಾವು ರೂಲ್ಸ್ 69 ಕೆಳಗಡೆ ಇದನ್ನು ಏನು ಡಿಸ್ಕಸ್ ಮಾಡುತ್ತಿದ್ದೀರಿ we will extend the scope of the discussion. I request you to participate in the discussion. you can raise all these matters. ಈಗ ತಮಗೆ ಗೊತ್ತಿದೆ ಸಮಯ ಬಹಳ ಕಡಿಮೆ ಇದೆ ಎಂದು. Kindly co-operate.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾರು ನಿಲುವಳಿ ಸೂಚನೆಯನ್ನು ತಂದಿದ್ದಾರೆ. ಅದನ್ನು ತೆಗೆದುಕೊಂಡರೆ ನಮ್ಮದು ಏನೂ ಅಭ್ಯಂತಕವಿಲ್ಲ. ಇದು ಒಂದು ದೊಡ್ಡ ವಿಷಯವಿದೆ. ನಮ್ಮ ಕೃಷ್ಣ ಬೇಸಿನ್ ಪ್ರಾಜೆಕ್ಟ್‌ಗಳ ಬಗ್ಗೆ ಮಾತನಾಡುವವರು ಇಲ್ಲ ಎನ್ನುವಂಥದ್ದು ಬರಬಾರದು.

ಅಧ್ಯಕ್ಷರು : ಇಲ್ಲ, ಆ ಮಾತಿನ ವ್ಯಾಪ್ತಿ ಏನಿದೆ ಅದನ್ನು ಬೇಕಾದರೆ ಹೆಚ್ಚು ಮಾಡಿಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ತಾವು ಅವಕಾಶವನ್ನು ಮಾಡಿಕೊಟ್ಟರೆ ನನ್ನದು ಏನೂ ಅಭ್ಯಂತರವಿಲ್ಲ. ಮತ್ತು ಇದರ ಬಗ್ಗೆ ಅವರೂ ಸಹ ಮಾಹಿತಿಯನ್ನು ಅಧಿಕಾರಿಗಳಿಂದ ತರಿಸಿಕೊಂಡು, ಕೊಡತಕ್ಕಂಥದ್ದು ಒಳ್ಳೆಯದು. ಇಲ್ಲ ಎಂದರೆ

ಡಿಮ್ಯಾಂಡ್ ಎಲ್ಲಿ ಹೋಗುತ್ತದೆಯೋ ಅದು ಚರ್ಚೆಯಾಗುವುದಿಲ್ಲವೆಂದು ನನಗೆ ಕಾಣುತ್ತಿದೆ. ಈ ಲಕ್ಷಣ ನೋಡಿದರೆ ಟೈಮ್ ಬಹಳ ಕಡಿಮೆ ಇದೆ. ಬಹಳ ಸವಿಸ್ತಾರವಾಗಿ ಇದರ ಬಗ್ಗೆ ಚರ್ಚೆಯಾಗುವಂಥ ಸಾಧ್ಯತೆ ಕಾಣುತ್ತಿಲ್ಲ. ಡಿಮ್ಯಾಂಡ್ ಕೊಟ್ಟಂತಹ 43-44 ಮತ್ತು ನೀರಾವರಿ ಮೇಲೆ ಅದಕ್ಕಾಗಿ ಇದನ್ನು ಇವತ್ತೆ ತಕ್ಷಣ ತೆಗೆದುಕೊಂಡರೆ ನನದೇನು ಅಭ್ಯಂತರ ಇಲ್ಲ. ನಾವು ಕೂಡ ಭಾಗವಹಿಸುತ್ತೇವೆ. ಮತ್ತು ಕೃಷ್ಣ ಮೇಲ್ದಂಡೆ ಯೋಜನೆ ಬಗ್ಗೆ ಕೂಡ ನಾವು ಪ್ರಸ್ತಾಪವನ್ನು ಮಾಡುತ್ತೇವೆ. ನಿಗಮದಲ್ಲಿ ಅವರು ಕೂಡಿಸಿದಂತಹ ಹಣದ ಬಗ್ಗೆ ಮತ್ತು ಕೆಲಸದ ಬಗ್ಗೆ ನಾವು ಪ್ರಸ್ತಾಪ ಮಾಡುತ್ತೇವೆ.

ಅಧ್ಯಕ್ಷರು : ನಿನ್ನೆಯ ದಿವಸ ಶೂನ್ಯವೇಳೆಯಲ್ಲಿ ಶ್ರೀಮಾನ್ ನಂಜೇಗೌಡರು ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಾ ಒಂದು ಹಂತದಲ್ಲಿ ಈ ಸದನದ ಸದಸ್ಯರಲ್ಲದೇ ಇರತಕ್ಕಂಥವರ ಹೆಸರನ್ನು ಪ್ರಸ್ತಾಪ ಮಾಡಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಅವರು ಹೇಗೆ ಕೊಟ್ಟರು, ಹೇಗೆ ಮಾಡಿದರು ಎನ್ನುವುದನ್ನು ಸಾಬೀತು ಮಾಡುವುದಕ್ಕೆ ಸಿ.ಬಿ.ಐ. ತನಿಖೆಗೆ ಪ್ರಾರ್ಥನೆಯನ್ನು ಮಾಡಿದ್ದುದು, ಮಾನ್ಯ ಮುನಿಯಪ್ಪನವರೆ ಜಯಲಲಿತ ಅವರಿಗೆ ಹೇಳಿ ಸಿ.ಬಿ.ಐ. ತನಿಖೆಗೆ ಏರ್ಪಡಿಸಿಯಮ್ಮ, ಆಗ ನಾವು ಪ್ರೂವ್ ಮಾಡುತ್ತೇವೆಂದು ಕೆಲವು ಮಾತನ್ನು ಹೇಳಿದರು ಈ ಮಾತನ್ನು ಸಕಾಲದಲ್ಲಿ ನಾನು ಆದೇಶವನ್ನು ಕೊಟ್ಟು ತೆಗೆಯಿಸಬೇಕಾಗಿತ್ತು, ಆದರೆ ನಾನು ಮಾಡಲಿಕ್ಕೆ ಆಗಲಿಲ್ಲ. ಇದೆಲ್ಲ ಇವತ್ತು ಪತ್ರಿಕೆಗಳಲ್ಲಿ ಪ್ರಕಟಣೆಯೂ ಆಯಿತು. ಇದರಿಂದ ನಾನು ಬಹಳ ನೊಂದಿದ್ದೇನೆ. ನಮ್ಮ ಪತ್ರಿಕಾ ವರದಿಗಾರರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ತಿದ್ದುಪಡಿಯನ್ನು ಪ್ರಕಟಣೆ ಮಾಡಬೇಕೆಂದು, ಹಾಗೆಯೇ ಮುಂದುವರೆದು ಮಾನ್ಯ ಸದಸ್ಯರಾದ ಶ್ರೀ ಮುನಿಯಪ್ಪನವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಅದೂ ಕೂಡ ಪ್ರಕಟವಾಗಿ ಬಿಟ್ಟಿದೆ. ಮೀನು ಮಾರುಕಟ್ಟೆಯಲ್ಲಿರಬೇಕಾದವರು. ಶಾಸಕರಾಗಿ ಬಂದಿದ್ದಾರೆ. ಇವರು ಎಲ್ಲೋ ಮೀನು ಹಿಡಿಯುತ್ತಿದ್ದವರು ಶಾಸಕರಾಗಿ ಬಂದಿದ್ದಾರೆ ಎನ್ನತಕ್ಕಂತಹ ಮಾತುಗಳೂ ಸಹ ಪತ್ರಿಕೆಗಳಲ್ಲಿ ಬಂದಿದೆ. ನಾನು ಆಗಲೇ ಹೇಳಿದೆ. ಆವೇಶ ಭರದಲ್ಲಿ ಆಡಿರತಕ್ಕಂತಹ ಮಾತುಗಳನ್ನು ಎಲ್ಲ ಕಡತದಿಂದ ತೆಗೆಸುತ್ತೇನೆಂದು ನಿನ್ನೇ ಈ ಕೆಲಸವನ್ನು ಮಾಡಿದ್ದರೆ ಇದು ಸಕಾಲಿಕ ಆಗುತ್ತಿತ್ತು. ನಾನು ಸ್ವಲ್ಪ ಎಚ್ಚರ ತಪ್ಪಿದ್ದರಿಂದ ಈ ಅನಾಹುತವಾಯಿತು. ಆದ್ದರಿಂದ ತೀವ್ರ ವಿಷಾದವನ್ನು ವ್ಯಕ್ತಮಾಡಿ, ಪತ್ರಿಕಾ ಸ್ನೇಹಿತರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ತಿದ್ದುಪಡಿಯನ್ನು ಹೊರಡಿಸಬೇಕು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ನೆನ್ನೆ ತಾವು ಒಂದು ರೂಲಿಂಗ್‌ನ್ನು ನೀಡಿದ್ದೀರಿ ಇದನ್ನು ತಾವು ಪುನರ್ ಪರಿಶೀಲನೆಯನ್ನು ಮಾಡಬೇಕೆಂದು ನನ್ನ ಅನಿಸಿಕೆ ಏಕೆಂದರೆ ಇವತ್ತು ಡೆಕ್ಕನ್ ಹೆರಾಲ್ಡ್‌ನಲ್ಲಿ ನೋಡಿದೆ. ಮತ್ತು ಪಾರ್ಲಿಮೆಂಟರಿ ಪ್ರೊಸಿಜರ್ಸ್‌ನೆಲ್ಲ ಇದರ ಬಗ್ಗೆ ತಮ್ಮ ಗಮನಕ್ಕೆ.....

ಅಧ್ಯಕ್ಷರು : ಈಗ ಒಂದು ಕೆಲಸವನ್ನು ಮಾಡೋಣ. I am going strictly according to the business. you can convince me about it.

ಗಮನ ಸೆಳೆಯುವ ಸೂಚನೆ

(1) ಕೈಗಾದಿಂದ ಶರಸಿಯವರೆಗೆ ವಿದ್ಯುತ್ ಲೈನ್ ಹಾಕುವ ಕಾಮಗಾರಿಯನ್ನು ನಿಲ್ಲಿಸುವ ಬಗ್ಗೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ನೀಡಬಯಸುತ್ತೇನೆ.